ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸಿ ಆ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ಸದನಕ್ಕೆ ತಿಳಿಸುತ್ತೇನೆ. ಮಾನ್ಯ ಶ್ರೀನಿವಾಸಗೌಡರು ಹೇಳಿದ ಹಾಗೆ ಹೊರಗಿನ ಖಾಸಗಿ ಕಂಪನಿಗಳು ಇಲ್ಲಿ ಬಂದು ಹಾಲನ್ನು ಮಾರುತ್ತಿದ್ದಾರೆ, ಆ ಬಗ್ಗೆ ಯಾವ ಕ್ರಮವನ್ನು ಜರುಗಿಸುತ್ತಿದ್ದೀರಿ ಎಂದು ಕೇಳಿದ್ದಾರೆ. It defeats your own question. Already we are selling it to 4 to 5 States. ಅವರೂ ಕೂಡ ನಾಳೆ ಅದೇ ತೀರ್ಮಾನವನ್ನು ನಮ್ಮ ವಿಚಾರದಲ್ಲಿ ತೆಗೆದುಕೊಂಡರೆ ಹೇಗೆ? I wanted to share the information given by the Hon'ble Member. He is giving the wrong information. ಕೇರಳದವರು ನಮ್ಮ ಹತ್ತಿರ ತೆಗೆದುಕೊಳ್ಳುತ್ತಿದ್ದಾರೆ, ಎಕ್ಸಿಸ್ ಪ್ರೊಡಕ್ಷನ್ ಇದೆ, ತಮಿಳುನಾಡಿನಲ್ಲಿ ಎಕ್ಸಿಸ್ ಪ್ರೊಡಕ್ಷನ್ ಇದೆ, ಮಹಾರಾಷ್ಟ್ರದಲ್ಲಿಯೂ ಎಕ್ಸಿಸ್ ಪ್ರೊಡಕ್ಷನ್ ಇದೆ, ಹೀಗೆ ಎಲ್ಲಾ ರಾಜ್ಯಗಳಲ್ಲಿಯೂ ಎಕ್ಸಿಸ್ ಪ್ರೊಡಕ್ಷನ್ ಇದೆ. ವೆಸ್ಟ್ ಬೆಂಗಾಲ್ ಮತ್ತು ಗೋವಾರಾಜ್ಯಗಳನ್ನು ಹೊರತುಪಡಿಸಿ ಎಲ್ಲಾ ರಾಜ್ಯಗಳಲ್ಲಿ ಎಕ್ಸಿಸ್ ಪ್ರೊಡಕ್ಷನ್ ಇದೆ. ಆದ್ದರಿಂದ ಕೇರಳದವರು ಆ ಸ್ಕ್ಯಾಂಡ್‌ನ್ನು ತೆಗೆದುಕೊಂಡರೆ ನಮ್ಮ ಕತೆ ಮುಗಿದು ಹೋಗುತ್ತದೆ. ಆದ್ದರಿಂದ ದಯಮಾಡಿ ಈ ಸ್ಕ್ಯಾಂಡ್‌ನ್ನು ನೀವು ಏನಾದರೂ ತೆಗೆದುಕೊಳ್ಳುವುದಾದರೆ ಕನ್‌ವರ್ಶನ್‌ಗೆ ಆಂಧ್ರಪ್ರದೇಶದಲ್ಲಿ ಏನು ಮಾಡುತ್ತಿದ್ದೇವೆ, ಕನ್‌ವರ್ಶನ್‌ಗೆ ತಮಿಳುನಾಡಿನ ಸಹಾಯ ತೆಗೆದುಕೊಂಡು ಏನು ಮಾಡುತ್ತಿದ್ದೇವೆ, ಎಂಬುದನ್ನು ತಿಳಿಸಿದ್ದೇವೆ. ಇದರ ಜೊತೆಗೆ ಸೇಲ್ ಮಾಡುವ ವಿಚಾರದಲ್ಲಿ ನಮಗೆ ಇರುವ ಕಾನೂನಿನ ಮಿತಿಯಲ್ಲಿ ಕ್ವಾಲಿಟಿ ಸರಿಯಾಗಿಲ್ಲ ಎಂದು ರೈಡಿಂಗ್ ತೆಗೆದುಕೊಂಡಿದ್ದೇವೆ, ಕೇಸ್‌ಗಳನ್ನು ಬುಕ್ ಮಾಡಿದ್ದೇವೆ. ಇಷ್ಟು ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ದಾವಣಗೆರೆ ಸಕ್ಕರೆ ಕಂಪನಿ, ಕುಕ್ಕವಾಡ ಇಲ್ಲಿ ರಸ್ತೆ ನಿರ್ವಹಣೆಗೆ ಹಣ ಸಂಗ್ರಹ

254(2738) ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) :— ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ದಾವಣಗೆರೆ ಸಕ್ಕರೆ ಕಂಪನಿ, ಕುಕ್ಕವಾಡ ಇಲ್ಲಿ 1999-2000ನೇ ಸಾಲಿನಲ್ಲಿ ಕಬ್ಬು ಸರಬರಾಜು ಮಾಡಿದವರಿಂದ ರಸ್ತೆ ನಿರ್ವಹಣೆಗಾಗಿ (ರಸ್ತೆ ದುರಸ್ಥಿಗೆಂದು) ಪ್ರತಿ ಟನ್ ರೂ. 10.00ರಂತೆ ಹಣ ಸಂಗ್ರಹಿಸುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಇದರಿಂದಾಗಿ ಸಂಗ್ರಹಿಸಿರುವ ಒಟ್ಟು ಮೊತ್ತವೆಷ್ಟು ;

ಇ) ಇದರಲ್ಲಿ ಖರ್ಚಾಗಿರುವ ಹಣವೆಷ್ಟು ಯಾವ ಯಾವ ಕಾಮಗಾರಿಗಳಿಗಾಗಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ. (ವಿವರ ನೀಡುವುದು)

ಈ) ಈ ಪೈಕಿ ಪೂರ್ತಿ ಹಣ ಖರ್ಚಾಗದೇ ಉಳಿದಿದ್ದಲ್ಲಿ, ಅದನ್ನು ಯಾವಾಗ ಖರ್ಚು ಮಾಡಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಹೌದು.

ಆ) 1999-2000ರ ಸಾಲಿನಲ್ಲಿ ಒಟ್ಟು ರೂ. 32,42,622 ರಸ್ತೆ ಕರವನ್ನು ಸಂಗ್ರಹಿಸಲಾಗಿದೆ.

ಇ) ಅನ್ವಯವಾಗುವ ಮಾರ್ಗಸೂಚಿಗಳಂತೆ 1999-2000ರ ಸಾಲಿನಲ್ಲಿ ಸಂಗ್ರಹವಾದ ಹಣವನ್ನು 2001-02ನೇ ಸಾಲಿನಲ್ಲಿ ಖರ್ಚು ಮಾಡಬೇಕಾಗಿದ್ದು, ಈ ಬಗ್ಗೆ ಕಾರ್ಖಾನೆಯಿಂದ ಪ್ರಸ್ತಾವನೆ ನಿರೀಕ್ಷಿಸಲಾಗಿದೆ.

ಈ) ಕಾರ್ಖಾನೆಯ ಪ್ರಸ್ತಾವನೆಯು ಬಂದ ನಂತರ 2001-02ನೇ ಸಾಲಿನಲ್ಲಿ ಮಂಜೂರ್ಮಾಡಲು ಬರುತ್ತದೆ.

ಶ್ರೀ ಎಸ್.ಎ. ರವೀಂದ್ರನಾಥ್ :— ಅಧ್ಯಕ್ಷರೇ ದಾವಣಗೆರೆ ಸಕ್ಕರೆ ಕಂಪನಿ ರಸ್ತೆ ನಿರ್ವಹಣೆಗೆ ಒಂದು ಟನ್ನಿಗೆ 10 ರೂನಂತೆ 32,42,622 ರೂಗಳನ್ನು ಎರಡು ವರ್ಷಗಳ ಹಿಂದೆ ಸಂಗ್ರಹಿಸಿತ್ತು. ಆದರೆ ಇವತ್ತಿಗೂ ಅದು ರಸ್ತೆ ನಿರ್ವಹಣೆ ಮಾಡಿಲ್ಲ. ಇನ್ನೊಂದು ತಿಂಗಳು ಬಿಟ್ಟರೆ ಮತ್ತೆ ಈ ವರ್ಷವೂ ಕಬ್ಬು ಕಡಿಯಬೇಕಾಗುತ್ತದೆ, ಅಲ್ಲೆಲ್ಲಾ ಓಡಾಡುವಂಥವುಗಳು ಎಂದರೆ ಟ್ರ್ಯಾಕ್ಟರ್ ಮತ್ತು ಎತ್ತಿನ ಬಂಡಿಗಳು. ಆದ್ದರಿಂದ ಆದಷ್ಟು ಬೇಗ ಹಣ ಖರ್ಚು ಮಾಡಿ ರಸ್ತೆ ರಿಪೇರಿ ಮಾಡಿಸಬೇಕು.

ಶ್ರೀ ಎ. ಕೃಷ್ಣಪ್ಪ :— ಅಧ್ಯಕ್ಷರೇ, ಈ ವರ್ಷದಲ್ಲಿ ಸಂಗ್ರಹಿಸಿರುವ ಮೊಬಲಗನ್ನೂ ಸೇರಿಸಿ ನಾನು ಅದನ್ನು ಕಾರ್ಯಗತಮಾಡಿಸಿಕೊಡುತ್ತೇನೆ. ಇದು ನಮ್ಮ ಕರ್ತವ್ಯವೂ ಹೌದು.

Mr. SPEAKER :— It is an assurance given on the floor of the House. Don't worry.

ಕೊರಟಗೆರೆ ತಾಲ್ಲೂಕಿನಲ್ಲಿ ಮಾಸಾಶನ ಪಡೆಯುತ್ತಿರುವ ಕಲಾವಿದರು.

255(2258) ಶ್ರೀ ಟಿನ್ನಿಗಪ್ಪ ಸಿ. (ಕೊರಟಗೆರೆ) :— ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಸರ್ಕಾರದ ವತಿಯಿಂದ ಕಲಾವಿದರ ಮಾಸಾಶನ ಪಡೆಯುತ್ತಿರುವ ಕಲಾವಿದರ ಸಂಖ್ಯೆ ಎಷ್ಟು? ಯಾವ ಯಾವ ಕಲಾವಿದರಿಗೆ ಸರ್ಕಾರದ ವತಿಯಿಂದ ಮಾಸಾಶನ ಮಂಜೂರು ಮಾಡಲಾಗುವುದು?